ಶ್ರೀ ಪಿ.ಜಿ.ಆರ್. ಸಿಂಧ್ಯ (ಒಳಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೇ, ನಿಯಮ 351ರ ಅಡಿಯಲ್ಲಿ ಸನ್ಮಾನ್ಯ ಶಾಸಕರಾದ ವಸಂತ ಸಾಲಿಯಾನರವರು ಎತ್ತಿರತಕ್ಕ ವಿಚಾರದಲ್ಲಿ ನನ್ನ ಹೇಳಿಕೆ ಈ ರೀತಿ ಇರುತ್ತದೆ.

ಕಾಪು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೋಲೀಸ್ ಠಾಣೆಗಳಲ್ಲಿ 1995ನೇ ಸಾಲಿನಲ್ಲಿ ಪಡುಬಿದ್ರಿ, ಶಿರ್ವಾ, ಮತ್ತು ಮಣಿಪಾಲ ಪೋಲೀಸ್ ಠಾಣೆಗಳಲ್ಲಿ ದರೋಡೆ, ಲೂಟಿ ಮತ್ತು ಹಗಲು ಕಳ್ಳತನದ ಪ್ರಕರಣಗಳು ವರದಿಯಾಗಿರುವುದಿಲ್ಲ. ಪಡುಬಿದ್ರಿ ಪೋಲೀಸ್ ಠಾಣೆಯಲ್ಲಿ 5 ರಾತ್ರಿ ಮನೆಗಳ್ಳತನದ ಪ್ರಕರಣಗಳು ವರದಿಯಾಗಿದ್ದು, 3ನ್ನು ಪತ್ತೆ ಮಾಡಲಾಗಿದೆ. ಮಣಿಪಾಲ ಪೋಲೀಸ್ ಠಾಣೆಯಲ್ಲಿ ರಾತ್ರಿ ಮನೆಗಳ್ಳತನದ 2 ಪ್ರಕರಣಗಳು, ಶಿರ್ವಾ ಪೋಲೀಸ್ ಠಾಣೆಯಲ್ಲಿ 7 ಪ್ರಕರಣಗಳು ವರದಿಯಾಗಿದ್ದು, ಈ ಎಲ್ಲಾ ಪ್ರಕರಣಗಳು ತನಿಖೆಯಲ್ಲಿವೆ.

1994ನೇ ಸಾಲಿನಲ್ಲಿ 30 ರಾತ್ರಿ ಮನೆಗಳ್ಳತನದ ಪ್ರಕರಣಗಳು ವರದಿಯಾಗಿದ್ದು, 3 ಪ್ರಕರಣಗಳು ಮಾತ್ರ ಪತ್ತೆಯಾಗಿದ್ದು 27 ಪ್ರಕರಣಗಳಲ್ಲಿ 'ಸಿ' ಅಂತಿಮ ವರದಿ ಸಲ್ಲಿಸಲಾಗಿದೆ. 1995ನೇ ಸಾಲಿನಲ್ಲಿ ಇಲ್ಲಿಯವರೆಗೆ 14 ಪ್ರಕರಣಗಳು ವರದಿಯಾಗಿದ್ದು, 3 ಪ್ರಕರಣಗಳು ಪತ್ತೆಯಾಗಿ 11 ಪ್ರಕರಣಗಳು ತನಿಖೆಯ ಹಂತದಲ್ಲಿವೆ. 1993ನೇ ಸಾಲಿನಲ್ಲಿ 18 ಪ್ರಕರಣಗಳು ಸಾಮಾನ್ಯ ಕಳುವಿನವಾಗಿದ್ದು 7 ಪ್ರಕರಣಗಳು ಪತ್ತೆಯಾಗಿವೆ, ಹಾಗೂ 11 ಪ್ರಕರಣಗಳಲ್ಲಿ 'ಸಿ' ವರದಿಯನ್ನು ಸಲ್ಲಿಸಲಾಗಿದೆ. 1994ನೇ ಸಾಲಿನಲ್ಲಿ ಸಾಮಾನ್ಯ ಕಳುವಿನ 5 ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ 2 ಪ್ರಕರಣಗಳು ಪತ್ತೆಯಾಗಿ, 3 ಪ್ರಕರಣಗಳಲ್ಲಿ 'ಸಿ' ವರದಿಯನ್ನು ಸಲ್ಲಿಸಲಾಗಿದೆ. ಈ ವರ್ಷದಲ್ಲಿ ಸಾಮಾನ್ಯ ಕಳುವಿನ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಿವೆ. 1995ನೇ ಸಾಲಿನಲ್ಲಿ ಸಾಮಾನ್ಯ ಕಳುವಿನ ಪ್ರಕರಣಗಳು 6 ವರದಿಯಾಗಿದ್ದು, 3 ಪ್ರಕರಣಗಳು ಪತ್ತೆಯಾಗಿ 3 ಪ್ರಕರಣಗಳು ತನಿಖಾ ಹಂತದಲ್ಲಿದೆ. ಈ ಮೇಲ್ಕಂಡ ಅಂಕಿಅಂಶಗಳಿಂದ ಕಾಪು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳವು, ದರೋಡೆ ಪ್ರಕರಣಗಳಲ್ಲಿ ಗಣನೀಯವಾಗಿ ಹೆಚ್ಚಳತೆ ಕಂಡು ಬರುವುದಿಲ್ಲ.

ಕಳವು, ದರೋಡೆ ಪ್ರಕರಣಗಳನ್ನು ತಡೆಗಟ್ಟುವ ದೃಷ್ಟಿಯಿಂದ ಸಹಾಯಕ ಪೋಲೀಸ್ ಸೂಪರಿಂಟೆಂಡೆಂಟ್ ಇವರ ನೇತೃತ್ವದಲ್ಲಿ ವಿಶೇಷ ಅಪರಾಧ ದಳವೊಂದನ್ನು ರಚಿಸಲಾಗಿದ್ದು ಈ ದಳವು ಅಪರಾಧಿಗಳನ್ನು ಕಂಡು ಹಿಡಿದು ಪ್ರಕರಣಗಳನ್ನು ಪತ್ತೆ ಹಚ್ಚಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಜಿಲ್ಲಾ ಅಪರಾಧ ದಳವು ಈ ದಳಕ್ಕೆ ಸಹಾಯ ನೀಡಿ ಕೇರಳ ರಾಜ್ಯದ ಗಡಿಯಿಂದ ಬರುವ ಅಪರಾಧಿಗಳ ಚಟುವಟಿಕೆಗಳನ್ನು ಗಮನಿಸಲು ನೆರವಾಗುತ್ತಿದೆ ಹಾಗೂ ಪ್ರಕರಣದ ಪತ್ತೆಗೆ ಸಹಕರಿಸುತ್ತಿದೆ. ರಾಷ್ಟ್ರೀಯ ಹೆದ್ದಾರಿ ನಂ. 17ರಲ್ಲಿ ಅಪರಾಧಿಗಳ ಚಟುವಟಿಕೆಗಳನ್ನು ಹತ್ತಿಕ್ಕಲು ಗಸ್ತು ಕರ್ತವ್ಯವನ್ನು ಬಿಗಿಗೊಳಿಸಲಾಗಿದ್ದು ಇದರಿಂದಾಗಿ ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ಅಪರಾಧ ಪರಿಸ್ಥಿತಿ ನಿಯಂತ್ರಣದಲ್ಲಿದೆ.

(4) ತುಂಬೆಯಲ್ಲಿರುವ ಪಂಪಿಂಗ್ ಸ್ಟೇಷನ್ನಿನ ಪಂಪಿನ ರಿಪೇರಿ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ಮಂಗಳೂರು ಮಹಾನಗರ ಪಾಲಿಕೆಗೆ ನೀರು ಸರಬರಾಜು ಮಾಡುತ್ತಿರುವ ತುಂಬೆಯಲ್ಲಿರುವ ಪಂಪಿಂಗ್ ಸ್ಟೇಷನ್‌ನಲ್ಲಿ ಪಂಪು ಹಳೆಯದಾಗಿದ್ದು ಅದರ ಕಾರ್ಯಕ್ಷಮತೆ ತುಂಬಾ ಕಡಿಮೆಯಾಗಿದ್ದು ಇದು ಕೆಟ್ಟಲ್ಲಿ ಮಂಗಳೂರು ನಗರಕ್ಕೆ ಕುಡಿಯುವ ನೀರು ಸಿಗದೇ ಗಂಭೀರ ಸಮಸ್ಯೆ ಉಂಟಾಗಬಹುದು. ಮಂಗಳೂರು ಮಹಾನಗರಪಾಲಿಕೆ ತನ್ನ ಪಾಲಿನ

ಹಣ 13 ಲಕ್ಷ ಕೊಟ್ಟಿದ್ದರೂ ಕರ್ನಾಟಕ ರಾಜ್ಯಸರ್ಕಾರ. ಕಳೆದ 3 ವರ್ಷಗಳಿಂದ ಮಂಜೂರಾತಿ ಕೊಡದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೈಜನಾಥ್ ಪಾಟೀಲ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ,

ಸರ್ಕಾರವು ಆಜ್ಞೆ ಸಂಖ್ಯೆ : ಹೆಚ್‌ಯುಡಿ : 10 : ಯುಡಬ್ಲ್ಯುಎಸ್ : 94, ದಿನಾಂಕ : 11-8-94ರಲ್ಲಿ ಮಂಗಳೂರು ನಗರದ ತುಂಬೆಯಲ್ಲಿರುವ ನೀರು ಸರಬರಾಜು ಯೋಜನೆಯಲ್ಲಿ 1971ರಲ್ಲಿ ಸ್ಥಾಪಿಸಲಾದ ಪಂಪುಗಳನ್ನು ಬದಲಾಯಿಸಲು 100 ಲಕ್ಷ ರೂ.ಗಳ ಅಂದಾಜಿಗೆ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ತಾತ್ವಿಕ ಅನುಮೋದನೆಯನ್ನು ನೀಡಿತು.

ಹುಡ್ಕೋ	-	ರೂ. 70.00 ಲಕ್ಷ
ಸರ್ಕಾರದ ಸಾಲ	-	ರೂ. 5.00 ಲಕ್ಷ
ವಿವಿಧ ಫಲಾನುಭವಿಗಳಿಂದ ಅವರ ಪಾಲು	-	ರೂ. 25.00 ಲಕ್ಷ
ಒಟ್ಟು		ರೂ. 100.00 ಲಕ್ಷ

ವಿವಿಧ ಫಲಾನುಭವಿಗಳಿಂದ ಅವರ ವತಿಯಿಂದ ಭರಿಸಬೇಕಾದ ಹಣದ ಪೈಕಿ ಅವರುಗಳು ಈ ಕೆಳಕಾಣಿಸಿದಂತೆ ಹಣವನ್ನು ಪಾವತಿಸಿರುತ್ತಾರೆ.

(ರೂ. ಲಕ್ಷಗಳಲ್ಲಿ)

	ಫಲಾನುಭವಿಗಳ ಹೆಸರು	ಅವರ ವತಿಯಿಂದ ಭರಿಸಬೇಕಾದ ಮೊತ್ತ	ಅವರು ಭರಿಸಿರುವ ಮೊತ್ತ
1.	ಮಂಗಳೂರು ನಗರಪಾಲಿಕೆ	13.19	13.19
2.	ಮಂಗಳೂರು ರಸಗೊಬ್ಬರ ಕಾರ್ಖಾನೆ	5.56	1.65
3.	ಎನ್.ಎಂ.ಪಿ.ಟಿ.	1.39	1.39
4.	ಸುರತ್ಕಲ್ ಪುರಸಭೆ	1.25	1.25
5.	ಕೆ.ಆರ್.ಇ.ಸಿ. ಸುರತ್ಕಲ್	0.42	0.42
6.	ಕಾಟಿಪಳ್ಳ ಮಂಡಲ್ ಪಂಚಾಯತ್	0.97	ಹಣ ಬಂದಿರುವುದಿಲ್ಲ
7.	ಕೆ.ಐ.ಎ.ಡಿ.ಬಿ	0.69	-ಡಿಟೋ-
8.	ಕೆ.ಎಸ್.ಎಸ್.ಐ.ಡಿ.ಸಿ.	1.53	-ಡಿಟೋ-
		25.00	16.95

ಬಹುತೇಕ ಫಲಾನುಭವಿಗಳು ತಮ್ಮ ವತಿಯ ಹಣವನ್ನು ತುಂಬಿದ್ದು, ಈ ಯೋಜನೆಯ ಅಂದಾಜು ಪಟ್ಟಿಗೆ ಆಡಳಿತ ಅನುಮೋದನೆ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಹಾಗೂ ಈ ಯೋಜನೆಯನ್ನು ಸದ್ಯದಲ್ಲೇ ಕೈಗೆತ್ತಿಕೊಳ್ಳಲಾಗುವುದು.